ಓ ಎಸ್ ನಂಃ 402/2024

ಡಿ. ಡಬ್ಲ್ಯೂ-1

**(ಇಂದು ದಿನಾಂಕ 24-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು)**

**ಮುಂದುವರೆದ ಮುಖ್ಯವಿಚಾರಣೆಃ ಪ್ರತಿವಾದಿ ಪರ ವಕೀಲರಿಂದ**

ನನ್ನ ಮುಖ್ಯ ವಿಚಾರಣೆ ಪ್ರಮಾಣ ಪತ್ರ ಸಲ್ಲಿಸಿದ್ದು ಅದರಲ್ಲಿ ಬರೆದಿರುವ ವಿಷಯಗಳು ಸತ್ಯವಾಗಿರುತ್ತವೆ .

ನಾನು ಈ ದಾವೆಯಲ್ಲಿ ಹಾಜರುಪಡಿಸಿರುವ ದಾಖಲೆಗಳನ್ನು ನೋಡಿದರೆ ಗುರುತಿಸುತ್ತೇನೆ . ಸಾಕ್ಷಿಯ ಗುರುತಿಸಿದ ದಾಖಲೆಗಳನ್ನು ಈ ಕೆಳಕಂಡಂತೆ ಗುರುತಿಸಲಾಯಿತು .

| **ಕ್ರಮ ಸಂಖ್ಯೆ** | **ದಾಖಲೆಗಳ ನಮೂನೆ** | **ನಿಶಾನೆ** |
|---|---|---|
| 1 | ಆಸ್ತಿ ಖರೀದಿ ವಿವರ ಪಟ್ಟಿ | ನಿಡಿ-1 |
| 2 | ಫೆಡರಲ್ ಬ್ಯಾಂಕ ಸ್ಟೇಟಮೆಂಟ | ನಿಡಿ-2 |
| 3 | ಕರ್ನಾಟಕ ಗ್ರಾಮೀಣ ಬ್ಯಾಂಕ ಸ್ಟೇಟಮೆಂಟ | ನಿಡಿ-3 |

**ಪಾಟೀಸವಾಲುಃ ವಾದಿ ಪರ ವಕೀಲರಿಂದ**

ನನ್ನ ತಕರಾರು ಹಾಗೂ ಸಾಕ್ಷಿ ಪ್ರಮಾಣದಲ್ಲಿರುವ ಮಾಹಿತಿಯನ್ನು ನಾನೇ

ಓ ಎಸ್ ನಂಃ 402/2024
ಡಿ. ಡಬ್ಲ್ಯೂ-1

ಕೊಟ್ಟಿರುತ್ತೇನೆ. ಅದರ ಬಗ್ಗೆ ನನಗೆ ಸಂಪೂರ್ಣ ಮಾಹಿತಿ ಇದೆ. ನಾನು ಮತ್ತು ಮೃತ ಪ್ರಕಾಶ ಹಾಲೂರವರು ಮೊದಲಿನಿಂದಲೂ ಸಂಬಂಧಿಕರಲ್ಲ. ಮೃತ ಪ್ರಕಾಶ ಅವರನ್ನು ಅವರ ತಂದೆ ತಾಯಿಯವರೇ ಬೆಳೆಸಿ ದೊಡ್ಡವರನ್ನಾಗಿ ಮಾಡಿದ್ದಾರೆ ಎಂದರೆ ಸರಿ. ಅವರು ಮದುವೆ ಆಗುವವರೆಗೂ ತಂದೆ ತಾಯಿ ಸುಪರ್ಧಿಯಲ್ಲಿ ಇದ್ದರು ಎಂದರೆ ಸರಿ. ಮದುವೆಯ ನಂತರ ನಾನು ಸದರಿ ಪ್ರಕಾಶ ಅವರನ್ನು ಮಿತಿ ಮೀರಿ ಹತೋಟಿಯಲ್ಲಿ ಇಟ್ಟುಕೊಂಡಿದ್ದೆ ಎಂದರೆ ಸರಿಯಲ್ಲ. ಸದರಿ ಹತೋಟಿಯಿಂದ ನನ್ನ ಗಂಡನ ಆರೋಗ್ಯ ಹದಗೆಟ್ಟಿತ್ತು ಎಂದರೆ ಸರಿಯಲ್ಲ. ಸದರಿಯವರು ಆತನ ತಂದೆ ತಾಯಿ ನೋಡಿಕೊಳ್ಳಲು ಆಗುತ್ತಿಲ್ಲ ಎಂದು ಮಾನಸಿಕವಾಗಿ ಬಳಲುತ್ತಿದ್ದ ಎಂದರೆ ಸರಿಯಲ್ಲ. ನನ್ನ ಗಂಡನ ತಂದೆ ತಾಯಿ ಆತನಿಗೆ ಶಿಕ್ಷಣ ಕೊಡಿಸಿ ನೌಕರಿ ಬರುವವರೆಗೂ ನೋಡಿಕೊಂಡಿದ್ದಾರೆ ಎಂದರೆ ಸರಿ. ನಾನು ನನ್ನ ತಕರಾರಿನ 4 ನೇ ಪ್ಯಾರಾದಲ್ಲಿ ನನ್ನ ಗಂಡನ ತಂದೆ ತಾಯಿ ಆತನಿಗೆ ಶಿಕ್ಷಣ ಕೊಡಿಸಿಲ್ಲ ಮತ್ತು ನೌಕರಿ ಬರುವವರಗೊ ನೋಡಿಕೊಂಡಿಲ್ಲ ಎಂದು ಸುಳ್ಳು ಬರೆಸಿದ್ದೆನೆ ಎಂದರೆ ಸಾಕ್ಷಿಯು ನಾನು ಬರೆಸಿಲ್ಲ ಎಂದು ಹೇಳುತ್ತಾರೆ. ಮೃತ ಪ್ರಕಾಶ ಆದಾಯದಲ್ಲಿ ಆತನ ತಾಯಿಗೂ ಸಹ ಭಾಗ ಇದೆ ಎಂದರೆ ಸರಿಯಲ್ಲ. ಸಾಕ್ಷಿಯು ಕೊಡುವುದಿಲ್ಲ ಎಂದು ಹೇಳುತ್ತಾರೆ.

ನನ್ನ ಅತ್ತೆಯ ಮೇಲೆ ನನಗೆ ಮೊದಲಿನಿಂದಲೂ ಪ್ರೀತಿ ಇಲ್ಲ ಎಂದರೆ ಸರಿಯಲ್ಲ. ಅವರ ಮೇಲೆ ಪ್ರೀತಿ ವಿಶ್ವಾಸ ಇದ್ದರೆ ಅವರನ್ನು ನಾನು ಚೆನ್ನಾಗಿ ನೋಡಿಕೊಳ್ಳುತ್ತಿದ್ದರೆ

ಎಂದರೆ ಸಾಕ್ಷಿಯು ಅವರು ನಮ್ಮ ಜೊತೆ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ನಮ್ಮ ಮದುವೆಯನ್ನು ಪ್ರಕಾಶನ ತಂದೆ ತಾಯಿ ಮಾಡಿದ್ದರೆ ಎಂದರೆ ಸರಿ. ಮದುವೆಯ ಸಮಯದಲ್ಲಿ ನಾವು ಒಟ್ಟಿಗೆ ಇದ್ದೆವು ಎಂದರೆ ಸರಿ. ಮದುವೆ ನಂತರ ನಾನು ಮನೆಗೆ ಬಂದ ಮೇಲೆ ವಾದಿಗೆ ಕಿರುಕುಳ ಕೊಟ್ಟು ಮನೆಯಿಂದ ಆಚೆ ಹಾಕಿದ್ದೆವೆ ಎಂದರೆ ಸರಿಯಲ್ಲ. ಅಲ್ಲಿಯೂ ಅವರು ಸುಖ ಸಂಸಾರದಿಂದ ಚೆನ್ನಾಗಿ ಇದ್ದರು ಎಂದರೆ ಸರಿಯಲ್ಲ.

ನನ್ನ ಗಂಡ ಮರಣ ನಂತರ ವಿಜಯ ಕರ್ನಾಟಕ ಪತ್ರಿಕೆಯಲ್ಲಿ ಪ್ರಥಮ ಪುಣ್ಯಸ್ಮರಣೆ ಜಾಹಿರಾತುಕೊಟ್ಟಿದ್ದೆವೆ ಎಂದರೆ ಸರಿ. ಸಾಕ್ಷಿಗೆ ದಿಃ 07-08-2025 ರ ವಿಜಯ ಕರ್ನಾಟಕ ಪತ್ರಿಕೆಯಲ್ಲಿನ ಜಾಹಿರಾತನ್ನು ತೋರಿಸಿ ಸಾಕ್ಷಿಯು ಅದನ್ನು ನೋಡಿ ಗುರುತಿಸಿದ್ದು ಅದನ್ನು ನಿಪಿ.5 ಎಂದು ಗುರುತಿಸಲಾಯಿತು. ಸದರಿ ಜಾಹಿರಾತನ್ನು ಸಾಕ್ಷಿಯ ಸಹಿಯನ್ನು ನಿಪಿ. 5 (ಎ) ಎಂದು ಗುರುತಿಸಲಾಯಿತು. ಆ ಸಮಯದಲ್ಲಿ ಹಾಗೂ ಇವತ್ತಿಗೂ ವಾದಿ ಜೀವಂತ ಇದ್ದಾರೆ ಎಂದರೆ ಸರಿ. ಸದರಿ ಜಾಹಿರಾತಿನಲ್ಲಿ ಸಂತಾಪ ಅವರ ಹೆಸರಿನಲ್ಲಿ ವಾದಿಯ ಹೆಸರನ್ನು ನಮೂದು ಮಾಡಿಲ್ಲ ಕಾರಣ ಅವರು 30 ವರ್ಷದಿಂದ ನಮ್ಮ ಜೊತೆ ಸಂಪರ್ಕದಲ್ಲಿ ಇಲ್ಲ ಎಂದು ಹೇಳುತ್ತಾರೆ. ಅವರ ಮೇಲೆ ಪ್ರೀತಿ ವಿಶ್ವಾಸ ಕಾಳಜಿ ಇರಲಿಲ್ಲ ಆದ್ದರಿಂದ ಅವರ ಹೆಸರು ನಮೂದು ಮಾಡಿಲ್ಲ ಎಂದರೆ ಸಾಕ್ಷಿಯು ವಾದಿಯವರು ಮೂರು ದಿವಸದ ಕಾರ್ಯಕ್ರಮಕ್ಕೆ 11 ದಿನದ ಕಾರ್ಯಕ್ರಮಕ್ಕೆ

ಮತ್ತು ಯಾವುದೇ ಕಾರ್ಯಕ್ರಮಕ್ಕೆ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ವಾದಿಯು ಎಲ್ಲ ಕಾರ್ಯಕ್ರಮಕ್ಕೂ ಬಂದಿದ್ದರು ಸಹ ನಾನೇ ಅವರಿಗೆ ಒಳಗಡೆ ಬಿಟ್ಟುಕೊಂಡಿಲ್ಲ ಎಂದರೆ ಸರಿಯಲ್ಲ.

ವಾದಿಯನ್ನು ಇವತ್ತಿನವರೆಗೂ ನಾನು ನೋಡಿಕೊಳ್ಳುತ್ತಿಲ್ಲ ಎಂದರೆ ಸರಿ. ವಾದಿಯನ್ನು ಮನೆಯಿಂದ ಹೊರಗೆ ಹಾಕಿದ ನಂತರ ಅವರ ತಮ್ಮ ಮತ್ತು ಅವರ ಮಗಳು ಸಾಕುತ್ತಿದ್ದಾರೆ ಮನೆಯಿಂದ ಹೊರಗೆ ಹಾಕಿಲ್ಲ ಆದರೆ ಅವರು ತಮ್ಮ ಮತ್ತು ಮಗಳು ಸಾಕುತ್ತಿದ್ದಾರೆ ಎಂದರೆ ಸರಿ. ದಾವಾ ಸ್ವತ್ತಿನಲ್ಲಿ ವಾದಿಗೂ ಪಾಲುಭಾಗ ಇದೆ ಎಂದರೆ ಸರಿಯಲ್ಲ. ಪಾಲುಭಾಗ ಕೊಡಬಾರದು ಎಂದು ಹೇಳಿ ಸುಳ್ಳು ತಕರಾರು ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ನಿಡಿ.1 ರಲ್ಲಿರುವ ಆಸ್ತಿ ವಾದಿಯ ಹೆಣ್ಣಾಸ್ತಿ ಎಂದರೆ ಸರಿಯಲ್ಲ, ಸಾಕ್ಷಿ ಅದು ವಾದಿಯ ಗಂಡನ ಆಸ್ತಿ ಎಂದು ಹೇಳುತ್ತಾರೆ. ನಿಡಿ.1 ರಲ್ಲಿ ನನ್ನ ಮಾವನ ಹೆಸರು ಇರುವುದಿಲ್ಲ ಅದನ್ನು ಅವರು ಇತ್ತೀಚೆಗೆ ಬದಲಾವಣೆ ಮಾಡಿರುತ್ತಾರೆ ಎಂದು ಹೇಳುತ್ತಾರೆ. ನಿಡಿ.1 ರಲ್ಲಿ ವಾದಿ ಹಾಗೂ ಆಕೆಯ ಸಹೋದರ ಸಹೋದರಿಯರ ಭಾಗ ಇದೆ ಎಂದರೆ ಸರಿಯಲ್ಲ. ನಿಡಿ.1 ರ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ನಿಡಿ.2 ರಲ್ಲಿರುವ ರೂ.51,000/- ಹಣವನ್ನು ಮನೆ ಕಟ್ಟಲು ಸಾಲ ತೆಗೆದುಕೊಂಡಿದ್ದೆವು.

ಓ ಎಸ್ ನಂಃ 402/2024

ಡಿ. ಡಬ್ಲ್ಯೂ-1

ರೂ.51000/- ಸಾಲದ ಪೈಕಿ ಕೇವಲ 2 ಕಂತು ತುಂಬಿರುತ್ತೇವೆ. ನಿಡಿ.3 ರಲ್ಲಿರುವ ಸಾಲ ನನ್ನ ಮಗನ ಶೈಕ್ಷಣಿಕ ಸಾಲ ಎಂದರೆ ಸರಿಯಲ್ಲ. ಸದರಿ ಸಾಲವನ್ನು ನಾವು ಮರುಪಾವತಿ ಮಾಡುತ್ತಾ ಬಂದಿದ್ದೆವೆ ಎಂದರೆ ಸರಿ. ನನ್ನ ಗಂಡನಿಗೆ ರೂ.1,00,000/- ಕ್ಕಿಂತ ಹೆಚ್ಚಿಗೆ ವೇತನ ಇತ್ತು ಎಂದರೆ ಸರಿಯಲ್ಲ. ನನ್ನ ಗಂಡ ಮರಣ ನಂತರ ನಾನು ಬ್ಯಾಂಕಿಗೆ ಹೋಗಿ ನನ್ನ ಗಂಡನ ವೇತನದ ಬಗ್ಗೆ ವಿಚಾರಿಸಿರುತ್ತೇನೆ ಆದರೆ ಅವರು ನ್ಯಾಯಾಲಯದ ತೀರ್ಪು ಆಗುವವರೆಗೂ ನಾವು ಹೇಳುವುದಿಲ್ಲ ಎಂದು ಹೇಳಿರುತ್ತಾರೆ ಎಂದು ಹೇಳುತ್ತಾರೆ. ನನ್ನ ಗಂಡನಿಗೆ ರೂ.1,00,000/- ವೇತನ ಇತ್ತು ಎಂದರೆ ಸರಿಯಲ್ಲ. ವಾದಿಗೆ ಪಾಲುಭಾಗ ಕೊಡಬೇಕಾಗುತ್ತದೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯು ಸಾವನ್ನು ನಾನು ಬಯಸುತ್ತಿದ್ದೆನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ ಇಲ್ಲ .**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ ,

**( ಆನಂದ ಎಸ್ ಕರಿಯಮ್ಮನವರ್)**
4 ನೇ ಹಿ ದಿ ನ್ಯಾಹಾಗೂ ಜೆಎಂಎಫ್‌ಸಿ,
ಧಾರವಾಡ.